ಸಾಕ್ಷಿಯನ್ನು ದಿನಾಂಕಃ 09/06/2025 ರಂದು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇಲೆ ಪ್ರಮಾಣೀಕರಿಸಲಾಯಿತು.

**ಮುಖ್ಯ ವಿಚಾರಣೆಃ- 1 ನೇ ಪ್ರತಿವಾದಿ ಪರ ವಕೀಲರಿಂದಃ**

ನಾನು ಈ ಪ್ರಕರಣದಲ್ಲಿ 1 ನೇ ಪ್ರತಿವಾದಿ ಇರುತ್ತೇನೆ. ನಾನು ಇಂದು ಮುಖ್ಯ ವಿಚಾರಣೆಯ ಹೇಳಿಕೆಗಳನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಲ್ಲಿದ್ದೇನೆ, ಸದರಿ ಪ್ರಮಾಣ ಪತ್ರದಲ್ಲಿ ಇರುವಂತಹ ಮಾಹಿತಿಗಳು ನನ್ನ ಹೇಳಿಕೆಯ ಮೇರೆಗೆ ತಯಾರಿಸಲಾಗಿದ್ದು ಅದರಲ್ಲಿ ಬರೆದಂತಹ ಎಲ್ಲ ಮಾಹಿತಿಗಳು ನಿಜವಿರುತ್ತದೆ ಎಂದು ತಿಳಿದು ನಾನು ನನ್ನ ಸಹಿ ಮಾಡಿರುತ್ತೇನೆ.

**ಮುಂದಿನ ಮುಖ್ಯ ವಿಚಾರಣೆ ಇಲ್ಲ ಎಂದು ಹೇಳಿರುತ್ತಾರೆ**

**ಪಾಟೀ ಸವಾಲುಃ- ವಾದಿ ಪರ ವಕೀಲರಿಂದಃ**

ನನ್ನ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯದ ಬಗ್ಗೆ ಮತ್ತು ವಾದ ಪತ್ರದಲ್ಲಿ ಬರೆದಿರುವ ವಿಷಯದ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ದಾವಾ ಸ್ವತ್ತಿನ ಬಗ್ಗೆ ನನಗೆ ಎಲ್ಲಾ ಮಾಹಿತಿ ಇದೆ. ದಾವಾ ಆಸ್ತಿಗಳು ನಮ್ಮ ತಂದೆಗೆ ಪಿತ್ರಾರ್ಜಿತವಾಗಿ ಬಂದ ಆಸ್ತಿಗಳು ಎಂದರೆ ಸರಿ. ನಮ್ಮ ತಂದೆ ತಾಯಿ ಸಾಯುವುದಕ್ಕಿಂತ ಮತ್ತು ಸತ್ತ ನಂತರ ಸಹ ನಮ್ಮ ಕುಟುಂಬದಲ್ಲಿ ಯಾವುದೇ ಪಾಲು ವಾಟ್ನಿ ಆಗಿಲ್ಲ ಎಂದರೆ ಸರಿ. ನಮ್ಮ ತಂದೆ ತಾಯಿಗೆ ನಾವು ಒಟ್ಟು 5 ಜನ ಮಕ್ಕಳು ದಾವಾ ಆಸ್ತಿಯಲ್ಲಿ ಮೂರು ಜನ ವಾದಿಗಳಿಗೆ ಹಿಸ್ಸೆ ಇದೆ ಎಂದರೆ ಸರಿ. ಸಾಕ್ಷಿ ನನಗೂ ಹಿಸ್ಸೆ ಇದೆ ಎಂದು ಹೇಳುತ್ತಾರೆ. ವಾದಿಗಳಿಗೆ ಹಿಸ್ಸೆ ಕೊಡಬೇಕಾಗುತತದೆ ಎಂದು ನೀವು ಮತ್ತು 2 ನೇ ಪ್ರತಿವಾದಿ ದಾವಾ ಆಸ್ತಿಗೆ ನಿಮ್ಮ ಹೆಸರು ಮಾತ್ರ ಹಚ್ಚಿಕೊಂಡಿದ್ದೀರಿ ಎಂದರೆ ಸರಿಯಲ್ಲ. ಎಲ್ಲರಿಗೂ 1/5 ಅಂಶ ಹಿಸ್ಸೆ ಇದೆ ಎಂದರೆ ಸರಿ. ವಾದಿಗಳಿಗೆ ದಾವಾ ಆಸ್ತಿಯಲ್ಲಿ 1/5 ಅಂಶ ಹಿಸ್ಸೆ ಕೊಡಲು ನಿಮ್ಮದು ತಕರಾರು ಇಲ್ಲ ಎಂದರೆ ಸರಿ. ಸಾಕ್ಷಿ ನನಗೂ 1/5 ಅಂಶ ಹಿಸ್ಸೆ ಕೊಡಬೇಕು ಎಂದು ಕೇಳಿಕೊಳ್ಳುತ್ತಾರೆ.

**ಮುಂದಿನ ಪಾಟೀ ಸವಾಲು ಇಲ್ಲ ಎಂದು ಹೇಳಿರುತ್ತಾರೆ**

**ಪ್ರತಿವಾದಿ ನಂ.2 ಮತ್ತು ಅವರ ಪರ ವಕೀಲರನ್ನು ನ್ಯಾಯಾಲಯಲ್ಲಿ ಕೂಗಿ ಕರೆಸಲಾಗಿ, ಗೈರು ಹಾಜರು ಆಗಿರುವುದರಿಂದ ಅವರ ಪರ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರುವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ.

(ಶ್ರೀಮತಿ ಪಿ. ಆರ್ ಪಾಟೀಲ)
09.06.2025
**ಅಧಿಕ ಹಿರಿಯ ದಿವಾಣಿ ನ್ಯಾಯಾಧೀಶರು, ಗದಗ**